ಬಾಲಿವುಡ್

# ವಿವಾದದಲ್ಲಿ ‘ಜಂಜೀರ್–2’




ಬಾಲಿವುಡ್‌ನಲ್ಲೀಗ ‘ಜಂಜೀರ್’ನದ್ದೇ ಸುದ್ದಿ. 1973ರಲ್ಲಿ ಬಿಡುಗಡೆಯಾಗಿ ಹೊಸ ಅಲೆಯನ್ನೇ ಸೃಷ್ಟಿಸಿದ, ಅಮಿತಾಭ್ ಬಚ್ಚನ್‌ಗೆ ‘ಆ್ಯಂಗ್ರಿ ಯಂಗ್ ಮ್ಯಾನ್’ ಇಮೇಜ್ ತಂದುಕೊಟ್ಟ ‘ಜಂಜೀರ್’ ಇವತ್ತಿಗೂ ಚಿತ್ರರಸಿಕರು ನೆನಪಿಸಿಕೊಳ್ಳುವ ಚಿತ್ರ. ಆ ಕಾಲದಲ್ಲಿ ‘ಜಂಜೀರ್’ನ ಯಶಸ್ಸಿಗೆ ಕಾರಣ ಅದರ ಪರಿಣಾಮಕಾರಿ ಚಿತ್ರಕಥೆ ಹಾಗೂ ಬೆಂಕಿಯುಗುಳುವ ಸಂಭಾಷಣೆ. ಅಮಿತಾಭ್‌ನ ವೃತ್ತಿಜೀವನಕ್ಕೆ ಬಹುದೊಡ್ಡ ಬ್ರೇಕ್ ಕೊಟ್ಟ ಸಿನಿಮಾವದು. ಹಾಗೆಯೇ ಸಲೀಂ– ಜಾವೇದ್ (ಸಲೀಂ ಖಾನ್ ಮತ್ತು ಜಾವೇದ್ ಅಖ್ತರ್) ಜೋಡಿ ಬಾಲಿವುಡ್‌ನ ಯಶಸ್ವಿ ಸಂಭಾಷಣೆಕಾರರಾಗಿ ಮೊದಲು ಹೆಸರು ಮಾಡಿದ್ದೂ ಅದೇ ಚಿತ್ರದಲ್ಲಿ. ಅಮಿತಾಭ್ ಮತ್ತು ಜಯಾ ಬಚ್ಚನ್ ನಡುವಣ ಪ್ರೇಮ, ಬಿಂದುವಿನ ಐಟಂ ಸಾಂಗ್, ಚರಿತ್ರ ನಟ ಪ್ರಾಣ್‌ನ ಚೇತೋಹಾರಿ ಅಭಿನಯ, ಖಳನಟ ಅಜಿತ್‌ನ ಮ್ಯಾನರಿಸಂ– ಹೀಗೆ ಆ ಸಿನಿಮಾ ಆ ಕಾಲದ ಸಿನಿರಸಿಕರ ಕನಸಿನ ಚಿತ್ರವಾಗಿ ರೂಪುಗೊಂಡಿತ್ತು.

ಅದೇ ಚಿತ್ರ ಇದೀಗ ಮತ್ತೆ ರಿಮೇಕ್ ಆಗುತ್ತಿದೆ. ಹೆಸರು ಜಂಜೀರ್–2. ತೆಲುಗು ‘ಮೆಗಾಸ್ಟಾರ್’ ಚಿರಂಜೀವಿಯ ಮಗ ರಾಮ್ ಚರಣ್ ಈ ‘ಎರಡನೇ ಜಂಜೀರ್’ನ ನಾಯಕ. ಉದ್ದುದ್ದ ಡೈಲಾಗ್‌ಗಳು ಈ ರಿಮೇಕ್‌ನಲ್ಲೂ ಇದೆಯಂತೆ. ಅದಕ್ಕೆಂದೇ ರಾಮ್ ಚರಣ್‌ಗೆ ವಿಶೇಷ ಹಿಂದೀ ತರಗತಿಗಳೂ ನಡೆದವು. ಅಮಿತಾಭ್‌ನ ಷೂ ಒಳಗೆ ಕಾಲು ತೂರಿಸಲು ರಾಮ್‌ಚರಣ್ ಸಾಕಷ್ಟು ಪ್ರಯಾಸ ಪಡುತ್ತಿದ್ದಾನಂತೆ. ಚಿತ್ರದ ಶೂಟಿಂಗ್ ಭರದಿಂದ ಸಾಗಿದೆ.

ಆದರೆ ಸದ್ಯಕ್ಕೆ ‘ಜಂಜೀರ್–2’ ಸುದ್ದಿ ಮಾಡಿರುವುದು ನೆಗೆಟಿವ್ ಕಾರಣಗಳಿಗೆ. ‘ಜಂಜೀರ್’ ನಿರ್ಮಾಪಕ ಪ್ರಕಾಶ್ ಮೆಹ್ರಾ ಆ ಕಾಲದ ಬಹುದೊಡ್ಡ ಹೆಸರು. ಅಮಿತಾಭ್‌ನ ಹಲವಾರು ಅದ್ದೂರಿ ಚಿತ್ರಗಳನ್ನು ಮುಂದೆಯೂ ನಿರ್ಮಿಸಿದಾತ. ಈಗ ಜಂಜೀರ್–2 ಅನ್ನು ನಿರ್ಮಿಸುತ್ತಿರುವುದು ಪ್ರಕಾಶ್ ಮೆಹ್ರಾ ಅವರ ಮಗ ಅಮಿತ್ ಮೆಹ್ರಾ. “ಈ ಸಿನಿಮಾದ ರಿಮೇಕ್ ಬಗ್ಗೆ ಅಮಿತ್ ನಮ್ಮ ಅನುಮತಿ ಪಡೆದಿಲ್ಲ. ಹಾಗಾಗಿ ಕಾಪಿರೈಟ್ ಕಾಯ್ದೆಯನ್ವಯ ರಾಯಧನಕ್ಕಾಗಿ ನಾವು ಮೊಕದ್ದಮೆ ಹಾಕಲಿದ್ದೇವೆ. ಈಗಾಗಲೆ ವಕೀಲರ ನೋಟಿಸ್ ಕಳುಹಿಸಲಾಗಿದೆ” ಎಂದು ಜಾವೇದ್ ಅಖ್ತರ್ ದೊಡ್ಡದೊಂದು ಬಾಂಬ್ ಹಾಕಿದ್ದಾರೆ.

“ಹಿಂದೆ ಜಂಜೀರ್ ಕಥೆ ಮಾಡಿದಾಗ ಅದರಲ್ಲಿ ನನ್ನ ಅಪ್ಪನ ಪಾತ್ರವೂ ಮಹತ್ವದ್ದೇ ಆಗಿತ್ತು. ಅದಕ್ಕಾಗಿ ಸಲೀಂ– ಜಾವೇದ್ ಅವರಿಗೆ ಸಂಭಾವನೆ ನೀಡಿಯಾಗಿದೆ. ಈಗ ರಿಮೇಕ್‌ಗೆ ಬೇರೆಯವರಿಂದ ಚಿತ್ರಕಥೆ ಮತ್ತು ಸಂಭಾಷಣೆ ಬರೆಸಿದ್ದೇವೆ. ಈಗಲೂ ಜಾವೇದ್ ಸಾಹೇಬರು ಸಂಭಾವನೆ ನಿರೀಕ್ಷಿಸುವುದು ಎಷ್ಟು ಸರಿ?” ಎನ್ನುವುದು ನಿರ್ಮಾಪಕ ಅಮಿತ್ ಪ್ರಶ್ನೆ. ಆದರೆ ಜಾವೇದ್ ಸಾಹೇಬರು ಜಗ್ಗುತ್ತಿಲ್ಲ. ಕಾನೂನು ಪ್ರಶ್ನೆಗಳನ್ನು ಎತ್ತಲು ಅವರು ವಕೀಲರ ತಂಡವೊಂದನ್ನು ರಚಿಸಿದ್ದಾರಂತೆ. ಹೊಸ ಕಾಪಿರೈಟ್ ಕಾಯ್ದೆಯನ್ವಯ ತಮಗೆ ಸಂಭಾವನೆ ಬರಲೇಬೇಕು ಎನ್ನುವುದು ಅವರ ಹಠ.

ಈ ಮಧ್ಯೆ ಒರಿಜಿನಲ್ ಜಂಜೀರ್‌ನ ನಾಯಕ ಅಮಿತಾಭ್ ಬಚ್ಚನ್ ಈ ವಿವಾದದಲ್ಲಿ ತಲೆ ತೂರಿಸಲು ಸಿದ್ಧರಿಲ್ಲ. ಅವರನ್ನು ಪತ್ರಕರ್ತರು ಪ್ರಶ್ನಿಸಿದರೆ, ‘ನಾನು ಹಿಂದೆ ಆ ಚಿತ್ರದಲ್ಲಿ ನಟಿಸಿದ್ದಕ್ಕೆ ನನಗೆ ಸಂಭಾವನೆ ಸಿಕ್ಕಿದೆ. ಈಗ ಈ ವಿಷಯದಲ್ಲಿ ನನ್ನ ಅಭಿಪ್ರಾಯ ಅನಗತ್ಯ. ಚಿತ್ರಕ್ಕೆ ಶುಭ ಹಾರೈಸುತ್ತೇನೆ’ ಎಂದಿದ್ದಾರೆ ಅಮಿತಾಭ್. ಸದ್ಯಕ್ಕೆ ಜಾವೇದ್ ಅಖ್ತರ್ ‘ಆ್ಯಂಗ್ರಿ ಯಂಗ್ ಮ್ಯಾನ್’ ಪಾತ್ರದಲ್ಲಿ ಕಂಗೊಳಿಸುತ್ತಿದ್ದಾರೆ!

ಜಯಾಬಚ್ಚನ್ ನಿರ್ವಹಿಸಿದ್ದ ಪಾತ್ರವನ್ನು ಪ್ರಿಯಾಂಕಾ ಚೋಪ್ರಾ ಮಾಡುತ್ತಿದ್ದಾರೆ. ಅಪೂರ್ವ ಲಖಿಯಾ ನಿರ್ದೇಶಿಸುತ್ತಿರುವ, ಎ.ಆರ್. ರೆಹಮಾನ್ ಸಂಗೀತ ಮತ್ತು ಪಿ.ಸಿ.ಶ್ರೀರಾಮ್ ಛಾಯಾಗ್ರಹಣ ಇರುವ ಈ ಚಿತ್ರ ಈಗಾಗಲೆ ಬಾಲಿವುಡ್‌ನಲ್ಲಿ ಭಾರೀ ಕುತೂಹಲ ಮೂಡಿಸಿದೆ. ನೀಲಿ ಚಿತ್ರಗಳ ತಾರೆ ಸನ್ನಿ ಲಿಯೊನ್ ಚಿತ್ರದಲ್ಲಿ ಒಂದು ಐಟಂ ಸಾಂಗ್‌ನಲ್ಲಿ ಕುಣಿದಿದ್ದಾರೆ ಎನ್ನುವ ಸುದ್ದಿಯೂ ಇದೆ. ವಿವಾದದ ಅಂತಿಮ ಪರಿಣಾಮ ಏನಾಗುತ್ತೋ ಗೊತ್ತಿಲ್ಲ, ಚಿತ್ರದ ಪ್ರಚಾರಕ್ಕಂತೂ ಹೊಸ ವೇಗ ಸಿಕ್ಕಿದೆ.

■ ಬಿಂದು

